ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಟೌನಿನಲ್ಲಿ ಮರಾಮತ್ತು ಇಲಾಖೆಯವರ ರಸ್ತೆಯಿದ್ದರೆ, ಆ ರಸ್ತೆಯ ಅಂಚಿನವರೆಗೂ ವ ನೆ ಕಟ್ಟಿಕೊಳ್ಳುವುದಕ್ಕೆ ಅವಕಾಶವಿದೆಯೆ ?

ಶ್ರೀ ಟಿ. ಚನ್ನಯ್ಯ.—ಅದಿನ್ನೂ disputeನಲ್ಲಿದೆ. ಸಾಮಾನ್ಯವಾಗಿ ರಸ್ತೆಯ ಅಂಚಿನಿಂದ 20 ಅಡಿ ಬಿಟ್ಟು ಕಟ್ಟಿಕೊಳ್ಳಬೇಕು ಎಂದು ಹೇಳಿದೆ. special case ಗಳಲ್ಲಿ 10 ಅಡಿ ಬಿಟ್ಟು ಕಟ್ಟಿಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಆ ರೀತಿ ಹತ್ತಡಿಯನ್ನು ಕೂಡ ರಸ್ತೆಯ ಪಕ್ಕದಲ್ಲಿ ಬಿಡದೆ ಸ್ಥೆಟುಗಳನ್ನು ಕೊಟ್ಟು ಕಟ್ಟಡ ಕಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—(a) ಗೆ ಉತ್ತರದಲ್ಲಿ, ಈ ಜಾಗವನ್ನು ಹರಾಜುಮಾಡಿ ಬಂದ ಹಣವನ್ನು ಆಸ್ಪತ್ರೆ ಕಟ್ಟಡಕ್ಕಾಗಿ ಕೊಡಬೇಕೆಂದು 1949-50ರಲ್ಲಿ ಮುನಿಸಿಪಾಲಿಟಿಯವರು ತೀರ್ಮಾನಿಸಿದರೆಂದು ಹೇಳಿದೆ. ಆಸ್ಪತ್ರೆಯನ್ನು ಎಲ್ಲಿ ಕಟ್ಟಬೇಕೆಂದು ಮಾಪಿದೆ ?

ಶ್ರೀ ಟಿ. ಚನ್ನಯ್ಯ.—ಆಸ್ಪತ್ರೆ ಮುಂಭಾಗದಲ್ಲಿರುವ ಖಾಲಿ ಜಾಗವನ್ನು ಸ್ಥೆಟುಗಳಾಗಿ ಎಂಗಡಿಸಿ ಹರಾಜು ಮಾಡುವುದರಿಂದ ಉತ್ಪತ್ತಿಯಾಗಬಹುದೆಂದು ನಿರೀಕ್ಷೆ ಸಿರುವ 1,-5,000 ರೂಪಾಯಿಗಳನ್ನು ಕಂಬ್ಯೌಂಡ್ ಆಸ್ಪತ್ರೆ ಕಟ್ಟಲು ಏನಿಯೋಗಿಸಬೇಕೆಂದೂ, ಸದರಿ ಖಾಲಿ ಜಾಗವನ್ನೂ ಹರಾಜು ಮಾಡಲು ಮಂಜೂರಾತಿ ಕೊಡುವ ಪೂರ್ವಭಾವಿಯಾಗಿ ಚಿಂತಾಮಣಿ ಮುನಿಸಿಪಲ್ ಕೌನ್ಸಿಲ್‌ರವರು 25,000 ರೂಪಾಯಿಗಳನ್ನು ಸರ್ಕಾರದಲ್ಲಿ ಡಿಪಾಜಿಟ್ಟು ಮಾಡತಕ್ಕುದೆಂದೂ ನಿರ್ಧರವಾಗಿದ್ದಿತು. ಅವರು ಹಣವನ್ನು ಡಿಪಾಜಿಟ್ಟು ಮಾಡಿಲ್ಲ. ಆದುದರಿಂದ ಸದರಿ ಖಾಲಿ ಜಾಗವನ್ನು ಹರಾಜುಮಾಡಲು ಮುನಿಸಿಪಲ್ ಕೌನ್ಸಿಲ್‌ರವರಿಗೆ ಅನುಮತಿ ಕೊಟ್ಟಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡಿಪಾಜಿಟ್ ಕೊಟ್ಟರೇನೆ ಅನುಮತಿ ಕೊಡುವುದೇ ?

ಶ್ರೀ ಟಿ. ಚನ್ನಯ್ಯ.—ಮುನಿಸಿಪಲ್ ಕೌನ್ಸಿಲ್‌ನವರೂ ಈ ಪರ್ಯಂತ್ತಿಗೆ ಒಪ್ಪಿದ್ದಾರೆ. 25,000 ರೂಪಾಯಿಗಳನ್ನು ಡಿಪಾಜಿಟ್ಟು ಮಾಡಿದನಂತರವೇ ಖಾಲಿ ಜಾಗ ಹರಾಜು ಮಾಡಲು ಅನುಮತಿ ಪಡೆಯುವುದಾಗಿ ಹೇಳಿದ್ದಾರೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಹೊಸದಾಗಿ ಆಸ್ಪತ್ರೆ ಕಟ್ಟುವುದು ಯಾವ ಜಾಗದಲ್ಲಿ ?

ಶ್ರೀ ಟಿ. ಚನ್ನಯ್ಯ.—ಈಗಿರುವ ಆಸ್ಪತ್ರೆಯ ಹಿಂಭಾಗದಲ್ಲಿ, ಪಕ್ಕದಲ್ಲೇ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಆಸ್ಪತ್ರೆಯ ನುತ್ತಲೂ ಇರತ ಜಾಗದಲ್ಲಿ ಅಂಗಡಿಗಳನ್ನು ಕಟ್ಟಿದರೆ ಆಸ್ಪತ್ರೆಯ ರೋಗಿಗಳಿಗೆ, ಗಾಳಿ, ಬೆಳಕು, ಇಲ್ಲದೆ ತೊಂದರೆಯಾಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದನ್ನೆಲ್ಲಾ ಆರೋಚಿಸಿಯೇ ಮುನಿಸಿಪಲ್ ಕೌನ್ಸಿಲ್‌ನವರು ಕಂಬ್ಯೌಂಡ್ ಡಿಸ್ಪೆನ್ಸರಿ ಕಟ್ಟಬೇಕೆಂದು ಮಾಡಿದ್ದಾರೆ. ಆದರೆ ಅವರಲ್ಲಿ ಸಾಕಷ್ಟು ಹಣವಿಲ್ಲ; ಈ ಸ್ಥೆಟುಗಳನ್ನು ವಿಸಾರಾಟ ಮಾಡಿದರೆ ಮಾತ್ರವೇ ಇದು ಸಾಧ್ಯವಾಗುತ್ತದೆಂದು ಹೇಳಿ ನಿರ್ಣಯ ಕಳುಹಿಸಿದ ಮೇರೆ, ಈಗ ಅದು ಸರ್ಕಾರದ ಪರ್ಯಾಲೋಚನೆಗೆ ಬಂದಿದೆ

Sri MULKA GOVINDA REDDY.—Since how long the ownership of the land is in dispute ?

Sri T. CHANNIAH.—Since 1949.

Sri MULKA GOVINDA REDDY.—For the last three years the Government have not come to any decision ?

Sri T. CHANNIAH.—Because the Municipal Council have failed to credit a sum of Rs. 25,000 in the first instance as promised.

Sri MULKA GOVINDA REDDY.—My question is this. The ownership of the land is in dispute; why the Government have not decided the ownership of the land for such a long time ?

Sri T. CHANNIAH.—It is still under consideration.

Providing drinking wells in the Villages of Nelamangala Taluk.

Q.—678. Sri D. M. GOVINDARAJU (Nelamangala).—

Will the Government be pleased to state :—

(*a*) the number and names of villages in Nelamangala Taluk from which petitions have been received by them since the last five years praying for the construction of drinking wells ;

(*b*) out of them, for how many villages such wells are now provided ;

(*c*) the names of villages for which such drinking wells are not yet provided ; (details to be furnished for five years) ?

A.—Sri T. CHANNIAH (Minister for Public Health and Local Self-Government).—

(*a*) 74. List appended.

(*b*) 22.

(*c*) List appended. Out of these 52 cases, well works are under progress in 5 cases and estimates have been sanctioned in 20 cases.

[*Vide* REPLY TO CLAUSES (*a*) AND (*b*).]

Statement showing the name of villages in Nelamangala Taluk from which petitions have been received since 1947-48 up-to-date, requesting Government to provide drinking water wells, provided and to be providde, etc.

Sl. No.	*Names of villages from which petitions have been received since* 1947-48 *requesting Government to provide Drinking Water Wells*	*Out of them the number of villages for which wells are now provided*	*The names of villages for which drinking water wells are not provided*
	FROM THE YEAR 1947-48 UP-TO-DATE		
1	Karihalli (ryots well) ..	1 Work completed and well provided.	
2	Arebommanahalli do ..	2 Do ..	
3	Mahadevapura (Voddars) ..	3 Do ..	
4	Chikkamaranahalli (A.K.'s) ..	4 Do ..	
5	Do do (ryots) ..		1 Well work under progress.
6	Thimmaboyipalya hamlet of Shivanapura	5 Well provided	
7	Sivagange (A.K.'s) ..		2 Do
8	Lakkur (ryots well) ..	6 Do ..	
9	Kerekattiganoor (ryots) ..	7 Do ..	
10	Makanakuppe do ..	8 Do ..	
11	Kerekattiganoor (A.K.'s) ..	9 Do ..	
12	Totadaguddadahalli ..		3 Do
13	Erranapalya hamlet of Makanakuppe (repair to old well.)	10 Do ..	
14	Mahimapura (ryots well) ..	11 Do ..	
15	Jodi Bedarahalli (A.K.) ..	12 Do ..	
16	Manchanahalli (ryots) ..	13 Do ..	
17	Arebommanahalli ..	14 Do ..	
18	Kachanahalli ..		4 Estimate sanctioned.
19	Thimmaboyipalya hamlet of Kasaraghatta (Voddars)	15 Do ..	
20	Channanagiahanapalya hamlet of Makanakuppe (repair to old wells).	16 Do ..	
21	Eramanchanahally (A.K.'s) ..	17 Do ..	
22	Begur do ..	18 Do ..	
23	Kachanahally do ..	19 Do ..	
24	Bommanahally ..		5 Estimate sanctioned and will be executed.
25	Mantanakurchi (ryots) ..		6 Estimate sanctioned
26	Vazarahalli (A.K.) ..	20 Do ..	

(Sri T. CHANNIAH.)

	Names of villages from which petitions have been received since 1947-48 requesting Government to provide Drinking Water Wells	*Out of them the number of villages for which wells are now provided*	*The names of villages for which drinking water wells are not provided*
27	Thonachanakuppe (repair to the old well)	21 Well provided	
28	Madanaikanahalli ..		7 Well under progress.
29	Chandanahosahalli (ryots) ..	22 Do ..	
30	Thippagondanahalli (ryots) ..		8 Estimate sanctioned and pending for want of allotment.
31	Voddarapalya hamlet of Alur ..		9 Do
32	Lankasandra ryots well ..		10 Do
33	Kullegowdanahalli A.K. well ..	..	11 Estimate sanctioned and pending for want of allotment.
34	Harokythanahalli (Ryots) ..	..	12 Do
35	Maragondanahalli (Ryots) ..	..	13 Do
36	Manne (A.K.'s) ..	..	14 Do
37	Gangondanahalli (A.K.'s) ..	..	15 Do
38	Binnamangala (A.K.'s) ..	..	16 Do
39	Araledibba (A.K.'s) ..	..	17 Do
40	Goranabele (A.K.'s) ..	..	18 Do
41	Darmanaikathundya Hamlet of Manchenahalli.	..	19 Do
42	Anchepalya ..	..	20 Do
43	Vadakunte (A.K.'s) ..	..	21 Do
44	Appegowdanahalli (A.K.'s) ..	..	22 Do
45	Goranabele ..	..	23 Do
46	Alpaianapalya Hamlet of Makankuppe	..	24 Estimate sanctioned and work will be entrusted after acceptance of tender

	Names of villages from which petitions have been received since 1947-48 requesting Government to provide Drinking Water Wells	*Out of them the number of villages for which wells are now provided*		*The names of villages for which drinking water wells are not provided*
47	Nagalur (ryots well) ..	..	25	Estimate not yet sanctioned for want of allotment.
48	Jodigovindapura ..	..	26	Do
49	Chikkapukkanahalli ..	..	27	Do
50	Kodipalya Hamlet of Begur ..	..	28	Do
51	Byranahalli ..	..	29	Do
52	Eramanchanahalli (Ryots) ..	..	30	Do
53	Thattekere do ..	..	31	Do
54	Kodappanahalli do ..	..	32	Do
55	Hosahalli do ..	..	33	Do
56	Gantehosahalli do ..	..	34	Do
57	Thimmasandra (A.K.'s) ..	..	35	Do
58	Suggaiahnapalya Hamlet of Bidasandra.	..	36	Do
59	Maraligulapalya Hamlet of Pillahalli.	..	37	Do
60	Gollarapalya Hamlet of Kachanahalli.	..	38	Do
61	Kuduregere (A.K.'s) ..	..	39	Do
62	Madalakote do ..	..	40	Do
63	Vajarahalli (Ryots) ..	..	41	Do
64	Lakshmipura ..	..	42	Estimate to be prepared.
65	Jodi Narayanapura (A.K.'s) ..	..	43	Do
66	Guddegowdanachonnahalli ..	..	44	Do
67	Kallanayakanahalli ..	..	45	Do
68	Malonagattihalli ..	..	46	Do
69	Muttayyanapalya Hamlet of Goragutta.	..	47	Do
70	Lakkasandra ..	..	48	Do
71	Voddarapalya Hamlet of Baragenahalli.	..	49	Do
72	Jodi Shamabhattarapalya (Dasarapura hobli)	..	50	Do
73	Bettahalli (A.K.) ..	..	51	Do
74	Mahadevapura (repairs to existing ryots wells).	..	52	Estimate sanctioned and work under progress.

ಶ್ರೀ ಡಿ. ಎಂ. ಗೋವಿಂದರಾಜು.—ನಾಗಲೂರು ಹಳ್ಳಿಯಲ್ಲಿ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಸುಮಾರು ಒಂದು ಮೈಲಿ, ಅರ್ಧಮೈಲಿ ದೂರದಿಂದ ಅವರು ನೀರನ್ನು ಹೊತ್ತು ತಂದು ಉಪಯೋಗಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಡಿ. ಗೋವಿಂದರಾಜು.—ಅಂದಾಜು ಮಂಜೂರಾಗಲಿಲ್ಲವೆಂದು ಹೇಳಿದ್ದೀರಿ. ಅಂದಾಜು ಮಂಜೂರಾಗಿ ಎಷ್ಟು ದಿವಸದಲ್ಲಿ ಟೆಂಡರುಗಳನ್ನು ಕರೆಯುತ್ತೀರಿ?

ಶ್ರೀ ಟಿ. ಚನ್ನಯ್ಯ.—ಅಂದಾಜು ಮಂಜೂರಾದ ತಕ್ಷಣ ಎಗ್ಜಿಕ್ಯೂಟಿವ್ ಎಂಜಿನಿಯರು ಟೆಂಡರ್ call for ಮಾಡುತ್ತಾರೆ.

ಶ್ರೀ ಡಿ. ಎಂ. ಗೋವಿಂದರಾಜು.—ಟೆಂಡರು accept ಆದ ಎಷ್ಟು ದಿವಸದಲ್ಲಿ ಬಾವಿ ಕೆಲಸ ಮಾಡಬೇಕು. ?

ಶ್ರೀ ಟಿ. ಚನ್ನಯ್ಯ.—ಟೆಂಡರಿನ ಷರತ್ತುಗಳಲ್ಲಿ ಆ ಅಂಶವನ್ನು ನಮೂದಿಸಿರುತ್ತದೆ. ಕೆಲವು ಸಂದರ್ಭಗಳಲ್ಲಿ ನಿಧಾನವಾಗುತ್ತದ್ದೆ. ಆದಷ್ಟು ಜಾಗ್ರತೆ ಬಾವಿ ಕೆಲಸಗಳನ್ನು ಪ್ರಾರಂಭಿಸಿ ಪೂರೈಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಅಂದಾಜು ಮಂಜೂರಾಗಬೇಕಾದರೆ ಎಷ್ಟು ದಿವಸಬೇಕು !

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಮರಾಮತ್ತು ಇಲಾಖೆಯವರು ಈ ಬಾವಿಗಳ ಕೆಲಸ ಮಾಡುತ್ತಾರೆಯೇ ಅಥವಾ ರೆವಿನ್ಯೂ ಇಲಾಖೆಯವರು ಮಾಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ರೆವೆನ್ಯೂ ಇಲಾಖೆಯವರೂ ಮಾಡುತ್ತಾರೆ, ಎಂಜಿನಿಯರಿಂಗ್ ಇಲಾಖೆಯವರೂ ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯ.—ನೆಲಮಂಗಲ ತಾಲ್ಲೂಕಿನಲ್ಲಿ ಆದಿಕರ್ಣಾಟಕರು ಬಾವಿಗಳಿಲ್ಲವೆಂದು ಅರ್ಜಿಗಳನ್ನು ಹಾಕಿದ್ದಾರಲ್ಲಾ, ಅವರಿಗೆ ಕುಡಿಯುವ ನೀರಿಗೆ ಸರ್ಕಾರದವರು ಏನು ಏರ್ಪಾಡು ಮಾಡಿದ್ದಾರೆ?

ಶ್ರೀ ಟಿ. ಚನ್ನಯ್ಯ.—ಕುಡಿಯುವ ನೀರಿನ ಬಾವಿಗಾಗಿ ಮನವಿಗಳು ಬಂದರೆ ಅದನ್ನು ಪರಿಶೀಲಿಸಿ ಅವಶ್ಯಕತೆ ಇರುವ ಕಡೆಗಳಲ್ಲಿ ಮಂಜೂರು ಮಾಡಲಾಗುತ್ತದೆ. ಬಾವಿಗಳನ್ನು ಕಟ್ಟಿಸುವ ಕೆಲಸವನ್ನು P. W. ಮತ್ತು ರೆವೆನ್ಯೂ ಇಲಾಖೆಯವರು ನಿರ್ವಹಿಸುತ್ತಾರೆ. ಬಾವಿ ಕಾಮಗಾರಿಗಳು ನಿಧಾನವಾಗುತ್ತವೆ, ತ್ವರಿತವಾಗಿ ಜರುಗಬೇಕೆಂಬುದೇ ಸರ್ಕಾರದ ಉದ್ದೇಶ. ಅದೇ ರೀತಿ ಸಂಬಂಧಪಟ್ಟ ಅಧಿಕಾರಿಗಳಿಗೆ ಎಚ್ಚರಿಗೆ ಕೊಡಲಾಗಿದೆ. ಜಾಗ್ರತೆ ಕ್ರೈಕೊಳ್ಳುತ್ತಾರೆ.

ಶ್ರೀ ಟಿ. ಹನುಮಯ್ಯ.—ಹೀಗೆ ಬಾವಿಗಳಿಲ್ಲವೆಂದು ಅರ್ಜಿಕೊಟ್ಟು ಎಷ್ಟು ವರ್ಷವಾಯಿತು ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಟಿ ಹನುಮಯ್ಯ.—ಅವರುಗಳಿಗೆ ಈವರೆಗೂ ಕುಡಿಯುವ ನೀರಿಗೆ ಏನು ಏರ್ಪಾಡು ಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಈ ಪ್ರಶ್ನೆಗೆ ನಾನು ಆಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಟಿ. ಹನುಮಯ್ಯ.—ಇಲ್ಲಿ ಕುಡಿಯುವ ನೀರಿನ ಬಾವಿಗಳಿಗಾಗಿ ಅರ್ಜಿಹಾಕಿಕೊಂಡಿದ್ದಾರಲ್ಲಾ ಅವರುಗಳು ಕುಡಿಯುವ ನೀರಿಗೆ ಈಗ ಏನು ಏರ್ಪಾಡು ಮಾಡಿಕೊಂಡಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಇಷ್ಟರತನಕ ಏನು ಏರ್ಪಾಡು ಮಾಡಿಕೊಂಡಿದ್ದರೋ ಅದೇ ಏರ್ಪಾಡು ಈಗಲೂ ಇದೆ.

ಶ್ರೀ ಟಿ. ಹನುಮಯ್ಯ.—ಸವರ್ಣ ಹಿಂದೂಗಳ ಬಾವಿಗಳಲ್ಲಲ್ಲಿಯೇ ಅವರೂ ನೀರು ಕುಡಿಯುತ್ತಿದ್ದಾರೆಯೇ !

ಶ್ರೀ ಟಿ. ಚನ್ನಯ್ಯ.—ಅದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಸರ್ಕಾರದವರು ಬಾವಿಗಳನ್ನು ತೋಡಿಸುವುದಕ್ಕೆ ಸಹಾಯ ಮಾಡುಮಾಡುತ್ತಿದ್ದಾರೆ. ವರ್ಷವರ್ಷವೂ ಯಾವ ಬಾವಿಯಲ್ಲಿ ನೀರು ಬಂತು, ಯಾವ ಬಾವಿಯಲ್ಲಿ ನೀರು ಬರಲಿಲ್ಲ ಎಂಬ ಬಗ್ಗೆ ಸರ್ಕಾರದವರು ವರದಿ ತರಿಸುತ್ತಾರೆಯೆ ?

ಶ್ರೀ ಟಿ. ಚನ್ನಯ್ಯ.—ಸಂಬಂಧಪಟ್ಟ ಇಲಾಖೆಯವರು ವರದಿ ತರಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಪಿ. ಆರ್. ರಾಮಯ್ಯ.—ಈ ತಾಲ್ಲೂಕಿನ ಬಾವಿಗಳಲ್ಲಿ ನೀರು ಬಂದಿದೆಯೆ ಅಥವಾ ಇಲ್ಲವೆಂಬುದಕ್ಕೆ ವರದಿ ತರಿಸಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಸಂಬಂಧಪಟ್ಟ ಇಲಾಖೆಯವರು ನೋಡುತ್ತಾರೆ.

ಶ್ರೀ ಪಿ. ಆರ್. ರಾಮಯ್ಯ.—ತಾವು ವರದಿಗಳನ್ನು ತರಿಸಿಕೊಂಡು ನೀರು ಬಾರದಿದ್ದರೆ ಏನು ಮಾಡಬೇಕೆಂದು ಪರಿಸೀಲಿಸಿದರೆ ಒಳ್ಳೆಯದಲ್ಲವೆ ?

Sri T. CHANNIAH.—The suggestion will be examined.

ಶ್ರೀ ಜಿ. ದಗ್ಗಪ್ಪ.—ಅರ್ಜಿಗಳು ಬಂದಾಗ ಅದನ್ನು ಪರಿಶೀಲನೆಮಾಡಿ, ತೀರ್ಮಾನಮಾಡಿ ಕೆಲಸ ಮಾಡುವುದಕ್ಕೆ ಕಾಲ ನಿಗದಿ ಮಾಡಿದ್ದೀರಾ !

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದಷ್ಟು ಶೀಘ್ರವಾಗಿ ಕೆಲಸ ಮುಂದುವರಿಸಲು ಇಲಾಖೆಯವರಿಗೆ ಸೂಚನೆಕೊಡಲಾಗುತ್ತಿದೆ.

ಶ್ರೀ ಜಿ. ದಗ್ಗಪ್ಪ.—ಒಂದು ಕಾಲ ಪರಿಮಿತಿಯಲ್ಲಿ ಅರ್ಜಿಗಳನ್ನು ತೀರ್ಮಾನ ಮಾಡಬೇಕೆಂದು ಗೊತ್ತು ಮಾಡಿದ್ದೀರಾ?

Mr. SPEAKER.—As expeditiously as possible.

ಶ್ರೀ ಎಚ್. ಕೆ. ಸಿದ್ದಯ್ಯ.—ಸಂಸ್ಥಾನದಲ್ಲಿ ಮುನಿಸಿಪಾಲಿಟಿಗಳಿಗೆ ನೀರು ಸರಬರಾಯಿಗೆ 50 ಲಕ್ಷ ರೂಪಾಯಿ ಸಾಲಕೊಟ್ಟಿದ್ದೀರಿ, ಪೈಪುಗಳ ಅಭಾವದಿಂದ ನೀರು ಒದಗಿಸುವ ಕೆಲಸ ಕಷ್ಟವಾಗಿದೆ ಎಂದು ಹೇಳಿದ್ದೀರಿ. ಆದುದರಿಂದ ಪೈಪುಗಳನ್ನು ಜಾಗ್ರತೆ ಸರಬರಾಯಿ ಮಾಡಲು ಸರಿಯಾದ ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ತಕ್ಕ ಏರ್ಪಾಡು ಮಾಡಿದ್ದೇವೆ; ಭದ್ರಾವತಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯ ಮೈಸ್-ಚೇರ್ಮನ್ನರವರಿಗೆ ಸಾಧ್ಯವಾದಷ್ಟು ಶೀಘ್ರವಾಗಿ ಹೈಪುಗಳನ್ನೊದಗಿಸಬೇಕೆಂದು ತಿಳಿಸಿದ್ದೇವೆ.

ಶ್ರೀ ಎ. ಮುನಿಯಪ್ಪ.—ಜೋಡಿ ಗ್ರಾಮಗಳಲ್ಲಿ ರೈತರು ಕೇಳಿದರೂ ನೀರಿನ ಅನುಕೂಲ ಕೊಡದೇ ಯಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಬಂದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Sri T. CHANNIAH.—It is a hypothetical question.

ಶ್ರೀ ಬಿ. ರಾಚಯ್ಯ.—ಸ್ಥಳೀಯ ಸಂಸ್ಥೆಗಳಿಗೆ ನೀರಾ ಸರಬರಾಯಿ ವ್ಯವಸ್ಥೆಗೆ ಸಾಲಕೊಟ್ಟಿದ್ದೀರಿ; ಇದೇ ರೀತಿ ಗ್ರಾಮಪಂಚಾಯಿತಿಗಳಿಗೂ ಕೊಟ್ಟಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ರಾಚಯ್ಯ.—ಇನ್ನು ಮುಂದೆಯೂ ನೀರಿನ ಅಭಾವವಿರುವ ಕಡೆ ಗ್ರಾಂಟು ಆಥವಾ ಸಾಲದ ರೂಪದಲ್ಲಿ ಇದೇ ಸೌಲಭ್ಯವನ್ನು ಒದಗಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಹಿಂದಿನಿಂದಲೂ ಕೊಡುತ್ತಿದ್ದೇವೆ, ಈಗಲೂ ಕೊಡುತ್ತೇವೆ.

Repairing and desilting of tanks in Bangalore South Taluk.

Q.—338. Sri A. V. NARASIMHA REDDY (Bangalore South).—

Will the Government be pleased to state :—

(*a*) the number of tanks estimated for repairs and desilting in Bangalore South Taluk during the last five years ;

(*b*) the number of works taken up and completed and the cost incurred ?

A.—Sri KADIDAL MANJAPPA (Minister for Revenue and Public Works).—

(*a*) Repair estimates for 36 tanks and desilting estimates for 3 tanks were prepared.

(*b*) Thirty-two repair works were taken up ; of which 24 works were completed at a cost of Rs. 12,574. Desilting of three tanks was taken up and one of them was completed by P. W. Department (Singasandra tank Rs. 8,521) and the remaining two works, *viz.*, Basavanapura tank and Venkappaiahnakere were executed by the Agricultural Department at a cost of Rs. 12,622.

ಶ್ರೀ ಎ. ವಿ. ನರಸಿಂಹರೆಡ್ಡಿ.—24 ಕೆರೆಗಳ ಕಾಮಗಾರಿ ಮುಗಿದಿದೆಯೆಂದು ಹೇಳಿದ್ದೀರಿ, ಉಳಿದಿರುವ ಕೆರೆಗಳ ಕಲಸ ಯಾವ ಘಟ್ಟದಲ್ಲಿದೆ ?

Sri H. SIDDAVEERAPPA.—They are at several stages of progress.

ಶ್ರೀ ಎ. ವಿ. ನರಸಿಂಹರೆಡ್ಡಿ.—36 ಕೆರೆಗಳಿಗೆ ಅಂದಾಜುಗಳು ತಯಾರಾಗಿವೆ, 32 ಕೆರೆಗಳ ಕೆಲಸ ತೆಗೆದುಕೊಂಡಿದೆ; ಇನ್ನುಳಿದ ನಾಲ್ಕು ಕೆರೆಗಳ ಅಂದಾಜು ಯಾವ ರೂಪದಲ್ಲಿವೆ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಪ್ರೋಗ್ರೆಸ್ ಆಗುತ್ತಿವೆ, ಇನ್ನು ಕೆಲವು ಕೆರೆ ಕೆಲಸಗಳನ್ನು ತೆಗೆದು ಕೊಳ್ಳಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಉಳಿದಿರುವ ನಾಲ್ಕು ಕೆರೆಗಳು ಯಾವುವೆಂಬುದನ್ನು ಹೇಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇವಕ್ಕೆ ಅಂದಾಜು ಯಾವಾಗ ಮಾಡಿದ್ದು ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಂಟು ಕೆರೆಗಳ ಕೆಲಸ ಪ್ರೋಗ್ರೆಸ್ ಆಗುತ್ತಿದೆ; ಯಾವ ಯಾವ ಸ್ಥಿತಿಯಲ್ಲಿವೆ ?

Sri H. SIDDAVEERAPPA.—These are matters of very great detail. If the Hon'ble Member wants, I shall furnish them to him.

Land Improvement Loans and Well Subsidies.

Q.—392. Sri G. DUGGAPPA (Holalkere—Scheduled Castes).—

Will the Government be pleased to state :—

(*a*) the total amount of Land Improvement loan as well as grant that was sanctioned during the last year and the current year (districtwar figures may be supplied) ;

(*b*) subsidy grant and loan that was sanctioned for the irrigation wells during the last year and the current year (districtwar figures may be supplied) ?